ಅ) ಧಾರವಾಡ ನಗರದಲ್ಲಿ ಬಡಾವಣೆಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಧಾರವಾಡದ ಅಂಥ ಬಡಾವಣೆಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗುವುದೆ;

ಇ) ಹಾಗಿದ್ದಲ್ಲಿ ಗ್ರಂಥಾಲಯಗಳನ್ನು ತೆರೆಯಲು ನಿವೇಶನಗಳನ್ನು ಪಡೆದುಕೊಳ್ಳಲಾಗಿದೆಯೇ;

ಈ) ಹಾಗಿದ್ದಲ್ಲಿ ಪಡೆದುಕೊಂಡ ನಿವೇಶನಗಳ ಸಂಖ್ಯೆ ಎಷ್ಟು;

ಉ) ನಿವೇಶನಗಳನ್ನು ಒದಗಿಸಿದರೆ ಎಷ್ಟು ಗ್ರಂಥಾಲಯಗಳನ್ನು ಕಟ್ಟಿಸುವ ಉದ್ದೇಶ ಸರ್ಕಾರಕ್ಕೆ ಇದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಹಂತ ಹಂತವಾಗಿ ಗ್ರಂಥಾಲಯಗಳನ್ನು ತೆರೆಯಲಾಗುವುದು

ಇ) ಹೌದು

ಈ) ಎರಡು

ಉ) ಪ್ರತಿ ಸಾಲಿನಲ್ಲಿ ಯೋಜನೆ ಅಡಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆ ಮಾಡುವ ಹಣದಲ್ಲಿ ಕಟ್ಟಡವನ್ನು ಹಂತ ಹಂತವಾಗಿ ನಿರ್ಮಿಸುವ ಉದ್ದೇಶ ಇದೆ.

ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ

1513 (1748) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಧಾರವಾಡದ ಜೀವನ ಶಿಕ್ಷಣ ಪತ್ರಿಕೆಯ ಡಾ॥ ಚನ್ನಬಸಪ್ಪರವರಿಂದ ಮಠ ಪತ್ರಿಕೆಯಾಗಿ ಪ್ರಾರಂಭವಾಗಿದ್ದು 136 ವರ್ಷಗಳ ಹಿಂದೆ ಪ್ರಾಥಮಿಕ ಕನ್ನಡದಲ್ಲಿ ಶಿಕ್ಷಣಕ್ಕಾಗಿ ಎಂಬುದು ಸರ್ಕಾರದ ಗಮನದಲ್ಲಿದೆಯೇ; ವಿವರಿಸುವಿರಾ;

ಆ) ಜೀವನ ಶಿಕ್ಷಣ ಪತ್ರಿಕೆಯ ಶತಮಾನೋತ್ತರ ಬೆಳ್ಳಿಹಬ್ಬ ಧಾರವಾಡದಲ್ಲಿ ಅಂದಿನ ಉಪರಾಷ್ಟ್ರಪತಿ ಶ್ರೀ ಶಂಕರ್‌ದಯಾಳ್ ಶರ್ಮಾರವರು ಉದ್ಘಾಟಿಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಾದರೆ ಅಂದಿನ ಕಾರ್ಯಕ್ರಮದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಡಾ॥ ಚನ್ನಬಸಪ್ಪ ಅವರ ಹೆಸರಿನ ಸೆಮಿನಾರ್ ಹಾಲ್ ಮತ್ತು ಸಭಾ ಭವನ ಕಟ್ಟಡ ಸಲುವಾಗಿ ರೂ. 10.00 ಲಕ್ಷ 1989-90ನೇ ಇಸ್ವಿಯಲ್ಲಿ ಮುಖ್ಯ ಇಂಜಿನಿಯರ್ ಲೋಕೋಪಯೋಗಿ ಧಾರವಾಡ ಎಲ್. ಓ. ಸಿ. ಯಿಂದ ವರ್ಗಾಯಿಸಿದ್ದಿರಾ ಹೇಗೆ ವಿವರ ತಿಳಿಸುವಿರಾ;

ಈ) ಸದ್ಯ ಹಣವನ್ನು ಆಲ್ಲಿಯ ಸಭಾ ಭವನದ ಅಗತ್ಯತೆಗಳಿಗೆ ಪೀಠೋಪಕರಣದ ಸಲುವಾಗಿ ಸರ್ಕಾರ ಬಿಡುಗಡೆ ಮಾಡುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು. ಈ ಪತ್ರಿಕೆಯು ಒಂದು ಶತಮಾನಕ್ಕೂ ಮೀರಿ ಕನ್ನಡದಲ್ಲಿ ಅನನ್ಯ ಸೇವೆ ಸಲ್ಲಿಸುತ್ತಾ ಬಂದಿದೆ.

ಆ) ಹೌದು

ಇ) ಮಾನ್ಯ ಮುಖ್ಯಮಂತ್ರಿಯವರು ಅಂದಿನ ಸಮಾರಂಭದಲ್ಲಿ 1989-90ನೇ ಸಾಲಿನ ಉಳಿತಾಯದಲ್ಲಿ ಬಿಡುಗಡೆ ಮಾಡಲು ಆಶ್ವಸನೆ ನೀಡಿದ್ದರು. ಆದರೆ ಆ ಸಾಲಿನಲ್ಲಿ ಯಾವುದೇ ಉಳಿತಾಯವಾಗದಿದ್ದುದರಿಂದ ಇದು ಕಾರ್ಯಗತವಾಗಲಿಲ್ಲ.

ಈ) ಈ ವರ್ಷದಲ್ಲಿ ಡಿಎಸ್‌ಇಆರ್‌ಟಿ ವತಿಯಿಂದ ಒಟ್ಟು 9.65 ಲಕ್ಷಗಳನ್ನು ಕಟ್ಟಡ ರಿಪೇರಿ ಹಾಗೂ ಇತರೆ ಸೌಕರ್ಯಗಳಿಗಾಗಿ ಬಿಡುಗಡೆ ಮಾಡಲಾಗುತ್ತಿದೆ. ಆದರಲ್ಲಿ ಸ್ವಲ್ಪ ಅನುದಾನ ಪೀಠೋಪಕರಣಗಳಿಗಾಗಿ ಉಪಯೋಗಿಸಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನಗರ ಗ್ರಂಥಾಲಯ ನಿಧಿಗೆ ಪಾವತಿಸಿರುವ ಕರದ ಮೊತ್ತ

1514(1860) ಶ್ರೀ ಬಸವರಾಜು .ಹೆಚ್.ಸಿ (ಪಿರಿಯಾಪಟ್ಟಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರ ಗ್ರಂಥಾಲಯ ನಿಧಿಗೆ ಕಳೆದ 3 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಯು ಪಾವತಿಸಿರುವ ಗ್ರಂಥಾಲಯ ಕರದ ಒಟ್ಟು ಮೊತ್ತ ಎಷ್ಟು? (ವರ್ಷವಾರು ವಿವರ ನೀಡುವುದು)

ಆ) ಈ ಮೊತ್ತವನ್ನು ಪಡೆದ ಅಧಿಕಾರಿಗಳು ಮತ್ತು ಹಣ ಹಂಚಿಕೆ ಮಾಡಲು ಇವರಿಗೆ ಸರ್ಕಾರದ ಯಾವ ಆದೇಶದಲ್ಲಿ ಅಧಿಕಾರ ನೀಡಿದೆ.

ಇ) ಹಣ ಖರ್ಚು ಮಾಡಲು ಈ ಅಧಿಕಾರಿಗಳಿಗೆ ನಿಯಮದಡಿ ನಿಯಂತ್ರಕರಾರು? ಹಣ ಅಸಮರ್ಪಕವಾಗಿ ಖರ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಈ ಬಗ್ಗೆ ವಿವರ ನೀಡುವುದು)

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)	1996-97	ರೂ : 269.43 ಲಕ್ಷ
	1997-98	ರೂ : 294.97 ಲಕ್ಷ
	1998-99	ರೂ : 405.70 ಲಕ್ಷ
	ಒಟ್ಟು :	ರೂ 980. 10 ಲಕ್ಷ